# ಮಧ್ಯಪ್ರಾಚ್ಯದಲ್ಲಿ ರಕ್ತದೋಕುಳಿ

■ ಡಿ.ಎಂ.ಘನಶ್ಯಾಮ

'ನಿಮ್ಮ ಅಸ್ತಿತ್ವವನ್ನೇ ಇಲ್ಲದಂತೆ ಮಾಡುತ್ತೇವೆ' ಎಂದು ಪ್ರತಿಜ್ಞೆ ಮಾಡಿರುವವರು ಒಂದುಕಡೆ, 'ನಿಮ್ಮ ಕೈಲಿ ಅದೇನಾಗುತ್ತೋ ಮಾಡಿ, ನಾವೂ ಒಂದು ಕೈ ನೋಡೇ ಬಿಡ್ತೀವಿ' ಎಂದು ಹಟಕ್ಕೆ ನಿಂತವರು ಮತ್ತೊಂದು ಕಡೆ. 2ನೇ ಮಹಾಯುದ್ಧ ಮುಗಿದ ನಂತರ ಶುರುವಾರ ಇಸ್ರೇಲ್–ಪ್ಯಾಲಸ್ತೀನ್ ಸಂಘರ್ಷ ವರ್ಷದಿಂದ ವರ್ಷಕ್ಕೆ ಚಿತ್ರವಿಚಿತ್ರ ತಿರುವುಗಳನ್ನು ತೆಗೆದುಕೊಂಡರೂ ಶಾಂತಿ ಮಾತ್ರ ಮಧ್ಯಪ್ರಾಚ್ಯದ ಪಾಲಿಗೆ ಮರೀಚಿಕೆಯಾಗಿಯೇ ಉಳಿದಿದೆ. ಇಸ್ರೇಲ್‌ನಲ್ಲಿ ಸರ್ಕಾರಗಳು ಬದಲಾಗುತ್ತಿವೆ, ಪ್ಯಾಲಸ್ತೀನ್‌ನಲ್ಲಿ ಪ್ರಭಾವಿಗಳ ತಲೆಗಳು ಉರುಳುತ್ತಿವೆ. ಆದರೆ ಶಾಂತಿಯ ಪಾರಿವಾಳಕ್ಕೆ ಕುಟುಕು ಜೀವ ನೀಡಬೇಕು ಎಂದು ಯಾರಿಗೂ ಅನ್ನಿಸುತ್ತಿಲ್ಲ.

ಪ್ಯಾಲಸ್ತೀನ್–ಇಸ್ರೇಲ್ ಗಡಿಯಲ್ಲಿ ಕಳೆದ ಒಂದು ವಾರದಿಂದ ಮತ್ತೆ ಬಾಂಬ್‌ಗಳು ಮೊರೆಯುತ್ತಿವೆ. ಪ್ಯಾಲಸ್ತೀನ್‌ಗೆ ಸೇರಿದ ಗಾಜಾಪಟ್ಟಿ ಎನ್ನುವ ತುಣುಕು ಭೂಮಿಯಲ್ಲಿ ಅಸ್ತಿತ್ವ ಉಳಿಸಿಕೊಳ್ಳಲು ಹೋರಾಡುತ್ತಿದ್ದ ತೀವ್ರಗಾಮಿ ಗುಂಪಿನ ನಾಯಕ ಅಬು ಅಲ್ ಅಟಾನ ಹತ್ಯೆಯಿಂದ ಉಂಟಾಗಿರುವ ಈ ಉದ್ವಿಗ್ನತೆ ಸದ್ಯಕ್ಕೆ ಆರುವ ಯಾವ ಲಕ್ಷಣಗಳೂ ಕಾಣಿಸುತ್ತಿಲ್ಲ. ಪ್ರತೀಕಾರದ ಹಪಹಪಿಯೊಂದಿಗೆ ಪ್ಯಾಲಸ್ತೀನ್ ಕಡೆಯಿಂದ ಹಾರಿ ಬರುತ್ತಿರುವ ರಾಕೆಟ್ ಬಾಂಬ್‌ಗಳಿಗೆ ಬೆದರಿ ಬಂಕರ್‌ಗಳಲ್ಲಿ ಬೀಡುಬಿಟ್ಟಿರುವ ಇಸ್ರೇಲಿಗಳ ದ್ವೇಷವೂ ಸದ್ಯಕ್ಕೆ ತಣಿಯುವ ಲಕ್ಷಣ ಕಾಣಿಸುತ್ತಿಲ್ಲ. ಇಸ್ರೇಲ್ ಸೇನೆ ಮತ್ತೊಂದು ದಾಳಿಯ ಎಚ್ಚರಿಕೆ ನೀಡಿದೆ.

## ಆದದ್ದೇನು?

ಯಹೂದಿಗಳಿಗೆ ಸೇರಿದ್ದು ಎಂದು ಇಸ್ರೇಲ್ ವಾದಿಸುವ ಜನವಸತಿಗಳ ಮೇಲೆ ರಾಕೆಟ್ ಬಾಂಬ್ ಹಾರಿಸುವ ಸಂಚು ರೂಪಿಸುತ್ತಿದ್ದ ಪ್ಯಾಲಸ್ತೀನ್ ಇಸ್ಲಾಮಿಕ್ ಜಿಹಾದ್ ಗುಂಪಿನ ಸದಸ್ಯ ಬಹಾ ಅಬು ಅಲ್ ಅಟಾ ಎಂಬಾತನನ್ನು ಇಸ್ರೇಲ್ ಸೇನೆ ನ.12ರಂದು ಮಿಂಚಿನ ದಾಳಿ (ಸರ್ಜಿಕಲ್ ಸ್ಟ್ರೈಕ್) ಕೊಂದು ಹಾಕಿತು. ಇದರ ಬೆನ್ನಿಗೇ ಇಸ್ರೇಲ್‌ನ



ಜನವಸತಿ ಪ್ರದೇಶಗಳ ಮೇಲೆ ಗಾಜಾದಿಂದ 250ಕ್ಕೂ ಹೆಚ್ಚು ರಾಕೆಟ್ ಬಾಂಬ್‌ಗಳು ಹಾರಿ ಬಂದವು.

## ಯಾರಿವನು?

ಪ್ಯಾಲಸ್ತೀನ್‌ಗೆ ಸೇರಿದ ಗಾಜಾ ಪಟ್ಟಿಯನ್ನು ಹಮಾಸ್ ಎನ್ನುವ ಶಸ್ತ್ರಸಜ್ಜಿತ ಗುಂಪು ನಿಯಂತ್ರಿಸುತ್ತಿದೆ. ಈ ಗುಂಪಿನೊಂದಿಗೆ ಅಧಿಕಾರಕ್ಕಾಗಿ ಪೈಪೋಟಿ ಮಾಡುತ್ತಿದ್ದ ಪ್ಯಾಲಸ್ತೀನ್ ಇಸ್ಲಾಮಿಕ್ ಜಿಹಾದ್ ಎನ್ನುವ ಮತ್ತೊಂದು ಗುಂಪಿನ ಮುಂಚೂಣಿ ನಾಯಕನಾಗಿದ್ದವ 42ರ ಹರೆಯದ ಬಹಾ ಅಬು ಅಲ್ ಅಟಾ. ಗಾಜಾ ಪಟ್ಟಿಯಲ್ಲಿ ಅವನ ಹೆಸರು ಮನೆಮಾತಾಗಿತ್ತು. ಅವನನ್ನು ಕೊಲ್ಲಲು ಇಸ್ರೇಲ್ ನಡೆಸಿದ ಹಲವು ಯತ್ನಗಳು ಈ ಹಿಂದೆ ವಿಫಲವಾಗಿದ್ದವು. ಇಸ್ರೇಲ್ ಮೇಲೆ ರಾಕೆಟ್, ಡ್ರೋಣ್ ಮತ್ತು ಸ್ನೈಪರ್ ದಾಳಿಗಳನ್ನು ರೂಪಿಸುವುದರಲ್ಲಿ ಅಲ್ ಅಟಾ ನಿಪುಣ ಎನ್ನುವುದು ಇಸ್ರೇಲ್ ಸೇನೆ, ಸರ್ಕಾರಗಳ ಆರೋಪ.

## ಅಲ್ಲೀಗ ಈಗ ಏನಾಗ್ತಿದೆ?

ಒಂದೆಡೆ ಇಸ್ರೇಲ್, ಮತ್ತೊಂದೆಡೆ ಈಜಿಪ್ಟ್, ಇನ್ನೊಂದೆಡೆ ಮೆಡಿಟರೇನಿಯನ್ ಸಮುದ್ರ ಇರುವ ಕೇವಲ 365 ಚದರ ಕಿ.ಮೀ. ವಿಸ್ತೀರ್ಣದ ಗಾಜಾ ಪಟ್ಟಿಯ ಜನಸಂಖ್ಯೆ ಸುಮಾರು 20 ಲಕ್ಷ. ಅರಬ್ ಮುಸ್ಲಿಮರು ಬಹುಸಂಖ್ಯಾತರು. ಪ್ಯಾಲಸ್ತೀನ್‌ನ ಆಡಳಿತಕ್ಕೆ ಒಳಪಟ್ಟರೂ ಈ ಪ್ರದೇಶ ಇಸ್ರೇಲ್ ಮತ್ತು ಈಜಿಪ್ಟ್‌ಗಳ ಅಡಕತ್ತರಿಯಲ್ಲಿ ಸಿಲುಕಿದೆ. ಈ ಎರಡೂ ದೇಶಗಳು ಗಾಜಾ ಪಟ್ಟಿ ನಾಗರಿಕರ ಸಂಚಾರಕ್ಕೆ ಕಳೆದ 10 ವರ್ಷಗಳಿಂದ ನಿರ್ಬಂಧ ಹೇರಿವೆ. ಗಾಜಾ ಹೋರಾಟಗಾರರಿಗೆ ಇರಾನ್‌ನ ಬೆಂಬಲವಿದ್ದರೆ, ಇಸ್ರೇಲ್‌ಗೆ ಅಮೆರಿಕ ಸೇರಿದಂತೆ ವಿಶ್ವದ ಹಲವು ದೇಶಗಳ ಬೆಂಬಲ ಇದೆ. ಶಾಂತಿ ಸ್ಥಾಪನೆಯ ಗಂಭೀರ ಪ್ರಕ್ರಿಯೆಗಳು ಆರಂಭವಾಗದಿದ್ದರೆ ಈ ಪ್ರದೇಶದಲ್ಲಿ ಹಿಂಸಾಚಾರ ಮತ್ತಷ್ಟು ಹೆಚ್ಚಾಗಲಿದೆ.

## ಕಟ್ಟರ್ ಬಲಪಂಥೀಯ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅನುಸರಿಸಿದ ಕಾರ್ಯಪದ್ಧತಿಯನ್ನೇ ಅನುಸರಿಸಿ ಅಧಿಕಾರಕ್ಕೆ ಬಂದವರು ಬೊನ್ಸೊನಾರೊ. ಬ್ರೆಜಿಲ್ ಅನುಭವಿಸಿದ ಆರ್ಥಿಕ ಬಿಕ್ಕಟ್ಟಿಗೆ ಅಲ್ಲಿನ ಸರ್ಕಾರದ ನಿಷ್ಕ್ರಿಯತೆಯೇ ಹೊಣೆ ಎಂದ ಬೊಲ್ಸೊನಾರೊ 1964ರಿಂದ 85ರವರೆಗೆ ಅಧಿಕಾರ ನಡೆಸಿದ ಮಿಲಿಟರಿ ಆಡಳಿತವನ್ನು ಹೊಗಳಿದ್ದರು. ದೇಶದ ಸುಧಾರಿಸಬೇಕು ಎಂದರೆ ನಾನು ಅಧಿಕಾರಕ್ಕೆ ಬರಬೇಕು, ನಾನೇ ಈ ದೇಶದ ಭವಿಷ್ಯ ಎಂದೆಲ್ಲಾ ಎಂದು ಪ್ರಚಾರ ನಡೆಸಿ, ಜನರನ್ನು ನಂಬಿಸಿ ಅಧಿಕಾರಕ್ಕೆ ಬಂದೂ ಬಿಟ್ಟರು.

## ವಿವಾದಾತ್ಮಕ ಹೇಳಿಕೆಗಳು

ಅಧಿಕಾರಕ್ಕೆ ಬಂದ ನಂತರವೂ ತಮ್ಮ ಕಟ್ಟರ್ ಬಲಪಂಥೀಯ ನಿಲುವುಗಳಿಂದ ಬೊಲ್ಸೊನಾರೊ ಅಲುಗಾಡಲಿಲ್ಲ. ಜನಾಂಗ, ಲಿಂಗ ಮತ್ತು ಲೈಂಗಿಕ ಆಸಕ್ತಿಗಳ ಬಗ್ಗೆ ಹಲವು ವಿವಾದಾತ್ಮಕ ಹೇಳಿಕೆಗಳನ್ನು ನೀಡಿದರು. ಬ್ರಿಜಿಲ್ ಓರ್ವ ಸಂಸದೆ ಬೊಲ್ಸೊನಾರೊ ಅವರನ್ನು 'ನೀನೊಬ್ಬ ಅತ್ಯಾಚಾರಿ' ಎಂದು ಟೀಕಿಸಿದಾಗ, 'ನಿನ್ನನ್ನು ನಾನು ರೇಪ್ ಮಾಡುವುದಿಲ್ಲ. ಯಾಕೆಂದ್ರೆ ಅಷ್ಟು ಯೋಗ್ಯತೆಯೂ ನಿನಗಿಲ್ಲ' ಎಂದು ಅಸಹ್ಯಕರವಾಗಿ ಲೇವಡಿ ಮಾಡಿದ್ದರು. ಸಲಿಂಗಿ ಮಗನನ್ನು ಪ್ರೀತಿಸಲು ನನ್ನಿಂದ ಆಗುವುದಿಲ್ಲ. ಹೆಣ್ಣುಮಕ್ಕಳು ಮನೆಯಲ್ಲಿರುವುದು ದೌರ್ಬಲ್ಯದ ಸಂಕೇತ ಎಂಬ ಹೇಳಿಕೆಗಳು ಬೊಲ್ಸೊನಾರೊ ಹೆಸರಿನಲ್ಲಿವೆ.

## ಹೇಗೆ ಆಯ್ಕೆ ಮಾಡುತ್ತಾರೆ?

ಗಣರಾಜ್ಯೋತ್ಸವಕ್ಕೆ 6 ತಿಂಗಳು ಮೊದಲು ಅತಿಥಿಯನ್ನು ಗುರುತಿಸುವ, ಆಮಂತ್ರಿಸುವ ಪ್ರಕ್ರಿಯೆಗಳು ಆರಂಭವಾಗುತ್ತವೆ. ಭಾರತವು ಆ ದೇಶದೊಂದಿಗೆ ಹೊಂದಿರುವ ಸಂಬಂಧವೇ ಅತಿಥಿ ಆಯ್ಕೆಗೆ ಇರುವ ಅತಿದೊಡ್ಡ ಮಾನದಂಡ. ಅತಿಥಿಯನ್ನು ಗುರುತಿಸಿದ ನಂತರ ವಿದೇಶಾಂಗ ಇಲಾಖೆ ಪ್ರಧಾನಿಯ ಅನುಮತಿ ಪಡೆದು, ನಂತರ ರಾಷ್ಟ್ರಪತಿ ಭವನದ ಒಪ್ಪಿಗೆ ಪಡೆದುಕೊಳ್ಳುತ್ತದೆ. ■

### ಗಣರಾಜ್ಯೋತ್ಸವಕ್ಕೆ ಬೊಲ್ಸೊನಾರೊ

ಮುಂದಿನ ಜನವರಿ 26ರಂದು ದೆಹಲಿಯಲ್ಲಿ ನಡೆಯಲಿರುವ 71ನೇ ಗಣರಾಜ್ಯೋತ್ಸವ ಪರೇಡ್‌ನ ಮುಖ್ಯ ಅತಿಥಿಯಾಗಿ ಬ್ರೆಜಿಲ್ ಅಧ್ಯಕ್ಷ ಜೈರ್ ಬೊಲ್ಸೊನಾರೊ ಪಾಲ್ಗೊಳ್ಳಲಿದ್ದಾರೆ. ಬ್ರಿಕ್ಸ್ ಸಮಾವೇಶದಲ್ಲಿ ಪಾಲ್ಗೊಳ್ಳಲೆಂದು ಬ್ರೆಜಿಲ್‌ಗೆ ಹೋಗಿದ್ದ ಪ್ರಧಾನಿ ನರೇಂದ್ರ ಮೋದಿ ಖಾಸಗಿ ಭೇಟಿ ವೇಳೆ ಬೊಲ್ಸೊನಾರೊ ಅವರಿಗೆ ಖುದ್ದು ಆಹ್ವಾನ ನೀಡಿದ್ದರು. ಬ್ರೆಜಿಲ್ ಆಡಳಿತದ ಚುಕ್ಕಾಣಿ ಹಿಡಿದಿರುವ ಬೊಲ್ಸೊನಾರೊ ಸರ್ಕಾರವು ತಮ್ಮ ದೇಶಕ್ಕೆ ಭೇಟಿ ನೀಡುವ ಭಾರತೀಯರಿಗೆ ವೀಸಾ ಅಗತ್ಯವಿಲ್ಲ ಎಂದು ಘೋಷಿಸಿ, ಭಾರತೀಯರಿಗೆ ಹತ್ತಿರವಾಗಿತ್ತು.